## ೭

# 700 ಕ್ಲಾಸ್‌ರೂಮ್ ಆಕ್ಟಿವಿಟೀಸ್: ಇನ್‌ಸ್ಟೆಂಟ್ ಲೆಸೆನ್ ಫಾರ್ ಬ್ಯುಸಿ ಟೀಚರ್ಸ್

## – ಡೇವಿಡ್ ಸೆಮೌರ್ ಅಂಡ್ ಮಾರಿಯಾ ಪೊಪೊವಾ

**– ವಂದನಾ ಪುರಿ**




**ಲೇಖಕರು: ಡೇವಿಡ್ ಸೆಮೌರ್ ಅಂಡ್ ಮಾರಿಯಾ ಪೊಪೊವಾ**
**ವರ್ಷ: (2003) 2015**
**ಪ್ರಕಟನೆ: ಮ್ಯಾಕ್ ಮಿಲನ್ ಬುಕ್ಸ್ ಆಕ್ಸ್‌ಫರ್ಡ್**
**ಐಎಸ್‌ಬಿನ್: 978–1–4050–8001–9**

**700 Classroom Activities:** Instant lessons for busy teachers By David Seymour & Maria Popova

ಪುಸ್ತಕ: ೭೦೦ ಕ್ಲಾಸ್‌ರೂಮ್ ಆಕ್ಟಿವಿಟೀಸ್ : ಇನ್‌ಸ್ಟೆಂಟ್ ಲೆಸೆನ್ ಫಾರ್ ಬ್ಯುಸಿ ಟೀಚರ್ಸ್

## (೨೦೦ ತರಗತಿಯ ಚಟುವಟಿಕೆಗಳು: ಕಾರ್ಯನಿರತ ಶಿಕ್ಷಕರಿಗೆ ತತ್‌ಕ್ಷಣದ(ಸಿದ್ಧ) ಪಾಠಗಳು)–

**ಸಾರಾಂಶ: ವಿದೇಶಿ ಭಾಷೆಯಾಗಿ ಇಂಗ್ಲಿಷ್ ಕಲಿಸುವ ಶಿಕ್ಷಕರಿಗೆ ಅದರಲ್ಲಿಯೂ ಇಂಗ್ಲಿಷ್ ಅನ್ನು ಪೂರ್ವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ತರಗತಿಗಳಲ್ಲಿ ಬೋಧನೆ ಮಾಡುವ ಶಿಕ್ಷಕರಿಗೆ ೨೦೦ ತರಗತಿ ಚಟುವಟಿಕೆಗಳನ್ನು ಒಳಗೊಂಡಿರುವ ಪುಸ್ತಕದ ಪರಿಚಯ ಇದಾಗಿದೆ. ಪುಸ್ತಕದ ಸ್ವರೂಪ, ಓದಿನ ಮತ್ತು ಉಪಯೋಗವನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.**

**ಪ್ರಮುಖ ಪದಗಳು: ವಿದೇಶಿ ಭಾಷೆಯಾಗಿ ಇಂಗ್ಲಿಷ್- English as a Foreign Language, ಭಾಷಾಕಲಿಕೆಯ ಚಟುವಟಿಕೆಗಳು–Activities of Language learning, ತರಗತಿ ಚಟುವಟಿಕೆ– Class room Activities.**

ಶೀರ್ಷಿಕೆಯು ಸೂಚಿಸುವಂತೆ, ಈ ಪುಸ್ತಕವು ಕಾರ್ಯನಿರತ EFL (ವಿದೇಶಿ ಭಾಷೆಯಾಗಿ ಇಂಗ್ಲಿಷ್ – English as a Foreign Language) ಹಾಗು ESOL (ಇತರ ಭಾಷೆಗಳನ್ನು ಮಾತನಾಡುವವರಿಗೆ ಇಂಗ್ಲಿಷ್–English to Speakers of Other Languages) ಪೂರ್ವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ತರಗತಿಗಳ ಶಿಕ್ಷಕರಿಗಾಗಿ ೨೦೦ ಚಟುವಟಿಕೆಗಳನ್ನು ಒಳಗೊಂಡಿದೆ. ಇಂಗ್ಲಿಷ್ ಬೋಧನೆಯನ್ನು ಮೋಜು ಮತ್ತು ಆಕರ್ಷಕವಾಗಿ ಮಾಡಲು ಬಯಸುವ ಶಿಕ್ಷಕರಿಗೆ ಇದು ಒಂದು ಪ್ರಮುಖ ಸಾಧನವಾಗಿದೆ. ಪುಸ್ತಕದಲ್ಲಿ ಸೂಚಿಸಲಾದ ಚಟುವಟಿಕೆಗಳು ಪಾಠ ಯೋಜನೆಯ ಭಾಗವಾಗಿ, ಪೂರಕ ವಸ್ತುವಾಗಿ ಅಥವಾ ಗಮನ ಬದಲಾವಣೆಯ ಅಗತ್ಯವಿರುವಾಗ ಸ್ಥಳದಲ್ಲೇ ಅಭ್ಯಾಸವನ್ನು ಒದಗಿಸಲು ಉದ್ದೇಶಿಸಲಾಗಿದೆ. ಹೆಚ್ಚಿನ ಚಟುವಟಿಕೆಗಳಿಗೆ ಯಾವುದೇ ತಯಾರಿಯ ಅಗತ್ಯವಿಲ್ಲ.

ಪುಸ್ತಕವನ್ನು ಸಂಭಾಷಣೆ, ಕಾರ್ಯ, ವ್ಯಾಕರಣ ಮತ್ತು ಶಬ್ದಕೋಶವಾಗಿ ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. ಪ್ರತಿ ವಿಭಾಗದಲ್ಲಿ ಒಂದಕ್ಕಿಂತ ಹೆಚ್ಚು ಚಟುವಟಿಕೆಗಳು ಇರಬಹುದು. ಈ ವಿಭಾಗಗಳಲ್ಲಿ, ಚಟುವಟಿಕೆಗಳನ್ನು ವರ್ಣಮಾಲೆಯ ಕ್ರಮದಲ್ಲಿ ಆಯೋಜಿಸಲಾಗಿದೆ. ಪುಸ್ತಕದ ಹಿಂಭಾಗದಲ್ಲಿರುವ ಅನುಬಂಧಲ್ಲಿ ವಿಷಯಗಳನ್ನು ಪಟ್ಟಿ ಮಾಡಲಾಗಿದೆ. ತರಗತಿಯ ಗಾತ್ರ ಮತ್ತು ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ಉತ್ಸಾಹವನ್ನು ಆಧರಿಸಿ ಚಟುವಟಿಕೆಗಳ ಸಮಯವನ್ನು ಶಿಕ್ಷಕರು ನಿರ್ಧರಿಸಬಹುದು. ಕೆಲವು ಚಟುವಟಿಕೆಗಳು ಯೋಜನೆಗಳ ರೂಪದಲ್ಲಿರುತ್ತವೆ, ಅವುಗಳನ್ನು ತರಗತಿಯ ಹೊರಗೂ ವಿದ್ಯಾರ್ಥಿಗಳು ಮಾಡಬಹುದಾಗಿವೆ ಮತ್ತು ಅವಕ್ಕೆ ಅಂತರ್ಜಾಲದಲ್ಲಿನ ಹುಡುಕಾಟವು

ಅಗತ್ಯವಾಗಬಹುದು. ಹೆಚ್ಚಿನ ಸಂದರ್ಭಗಳಲ್ಲಿ, ಚಟುವಟಿಕೆಯ ಕಡೆಗೆ ಸಂಭಾಷಣೆಯನ್ನು ತಿರುಗುವಂತೆ ಮಾಡಲು ಶಿಕ್ಷಕರು ಚಟುವಟಿಕೆಯ ಶೀರ್ಷಿಕೆಯನ್ನು ಕಪ್ಪುಹಲಗೆಯ ಮೇಲೆ ಬರೆಯಲು ಪ್ರೋತ್ಸಾಹಿಸಲಾಗುತ್ತದೆ. ಚಟುವಟಿಕೆಯ ಶೀರ್ಷಿಕೆಯ ಪಕ್ಕದಲ್ಲಿ ಚಟುವಟಿಕೆಯ ಕ್ಲಿಷ್ಟತೆಯ ಮಟ್ಟವನ್ನು ಗುರುತಿಸಲಾಗಿದೆ. ಸೆಮೌರ್ ಮತ್ತು ಪೊಪೊವಾ ಅವರು ವ್ಯಾಕರಣಾಂಶಕ್ಕೆ ಶ್ರೇಣಿಯನ್ನು ಹೆಚ್ಚು ನಿರ್ಬಂಧಿಸಬೇಕೆಂದು ಸೂಚಿಸುತ್ತಾರೆ: ಸಂಭಾಷಣೆ ವಿಷಯಗಳಿಗೆ ಸಂಬಂಧಿಸಿದ ಚಟುವಟಿಕೆಗಳಿಗಾಗಿ, ಶ್ರೇಣೀಕರಣವು ಹೆಚ್ಚಿನ ತರಗತಿಗಳು ಮತ್ತು ನಿರ್ದಿಷ್ಟವಾದ ಮಟ್ಟದ್ದಾಗಿರಬೇಕಾಗುತ್ತದೆ. ಗಮನಿಸಬೇಕಾದ ಆಸಕ್ತಿದಾಯಕ ವಿಷಯವೆಂದರೆ, ಮಕ್ಕಳಿಗೆ ಸೂಕ್ಷ್ಮ ಅಥವಾ ಮುಜುಗರವಾಗಬಹುದಾದಂತಹ ವಿಷಯಗಳ ಪಕ್ಕದಲ್ಲಿ ಅಪಾಯದ ಚಿಹ್ನೆಯನ್ನು ಹೊಂದಿರುತ್ತವೆ, ಇದರಿಂದಾಗಿ ಶಿಕ್ಷಕರು ಆ ಚಟುವಟಿಕೆಯನ್ನು ಬಳಸುವ ಬಗೆಗೆ ಎಚ್ಚರಿಕೆಯಿಂದ ನಿರ್ಧಾರ ತೆಗೆದುಕೊಳ್ಳಬಹುದು.

ಚಟುವಟಿಕೆಗಳನ್ನು ನಾಲ್ಕು ಮುಖ್ಯ ವಿಭಾಗಗಳಾಗಿ ವಿಂಗಡಿಸಲಾಗಿದೆ:

- ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರಶ್ನೆಗಳು, ಪ್ರಮುಖ ಪದಗಳು ಅಥವಾ ನುಡಿಗಟ್ಟುಗಳೊಂದಿಗೆ ಪ್ರೇರೇಪಿಸುವಂತಹವು
- ಸುಳಿವುಗಳನ್ನು ಹಲಗೆಯ ಮೇಲೆ ಬರೆಯಲಾಗಿರುತ್ತದೆ.
- ಚಟುವಟಿಕೆಗಳನ್ನು ಲಘು ಉಕ್ತಲೇಖನದ ಮೂಲಕ ಅಥವಾ ಪಾತ್ರಗಳ ಹಂಚಿಕೆಯ ಮೂಲಕ ಬಳಸಲಾಗುತ್ತದೆ
- ಒಬ್ಬ ವಿದ್ಯಾರ್ಥಿಯು ತರಗತಿಯ ಹೊರಗೆ ಚಟುವಟಿಕೆಯನ್ನು ಸಿದ್ಧಪಡಿಸುತ್ತಾನೆ ಮತ್ತು ಅದನ್ನು ತರಗತಿಯಲ್ಲಿ ಪ್ರಸ್ತುತ ಪಡಿಸುತ್ತಾನೆ.

ಹೆಚ್ಚಿನ ಚಟುವಟಿಕೆಗಳು ವಿಭಿನ್ನ ಭಾಗಗಳನ್ನು ಹೊಂದಿದ್ದು, ಅವುಗಳನ್ನು ಜೋಡಿಯಾಗಿ, ಗುಂಪುಗಳಾಗಿ ಅಥವಾ ಮುಕ್ತ ತರಗತಿಯ ಚಟುವಟಿಕೆಯಾಗಿ ಮಾಡಬೇಕಾಗಿದೆ. ಈ ಚಟುವಟಿಕೆಗಳು ವಿದ್ಯಾರ್ಥಿಗಳನ್ನು ವಿವಿಧ ರೀತಿಯ ಕೌಶಲ್ಯಗಳಲ್ಲಿ ತೊಡಗಿಸುತ್ತವೆ. ಸೆಮೌರ್ ಮತ್ತು ಪೊಪೊವಾ ಅವರು ಸೂಚಿಸುತ್ತಾರೆ; ತಂಡದ ಆಟಗಳು ಅನೇಕ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿರುತ್ತವೆ. ಅಂತಹ ಆಟಗಳು ಸ್ನೇಹಯುತ ಸ್ಪರ್ಧಾತ್ಮಕತೆಯನ್ನು ಉತ್ತೇಜಿಸುತ್ತವೆ ಮತ್ತು ತರಗತಿಯಲ್ಲಿ ವಿದ್ಯಾರ್ಥಿಯು ಭಾವನಾತ್ಮಕವಾಗಿ ತೊಡಗಿಸಿಕೊಳ್ಳುವಿಕೆಯನ್ನು ಹೆಚ್ಚಿಸುತ್ತವೆ.

ಈ ಪುಸ್ತಕವು ತಮ್ಮ ವಿದ್ಯಾರ್ಥಿಗಳನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಯೋಜಿತ ಅಭ್ಯಾಸಕ್ರಮದ ವಸ್ತುಗಳನ್ನು ಮೀರಿ ಹೋಗಲು

ಬಯಸುವ ಶಿಕ್ಷಕರಿಗೆ ಪ್ರಮುಖ ಸಾಧನವಾಗಿದೆ. ಚಟುವಟಿಕೆಗಳು ನವೀನ ಮತ್ತು ಆಕರ್ಷಕವಾಗಿದ್ದು, ಇಂಗ್ಲಿಷ್ ಕಲಿಕೆಯನ್ನು ಹೆಚ್ಚಿಸುತ್ತವೆ. ಶಿಕ್ಷಕರು ಅಗತ್ಯಕ್ಕೆ ತಕ್ಕಂತೆ ಇತರ ಭಾಷೆಗಳನ್ನು ಕಲಿಸಲು ಇವುಗಳಲ್ಲಿ ಕೆಲವು ಚಟುವಟಿಕೆಗಳನ್ನು ಮಾರ್ಪಡಿಸಬಹುದು.

* * *

**ಚಿಂತನಾತ್ಮಕ ಪ್ರಶ್ನೆಗಳು:**

೧. ಇಲ್ಲಿ ನೀಡಿರುವ ಚಟುವಟಿಕೆಗಳ ಪಟ್ಟಿ ಎಲ್ಲ ಪಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೂ ಅನ್ವಯವಾಗುತ್ತದೆಯೇ? ಅಥವಾ ಬೇರೆ ಬೇರೆಯಾಗುತ್ತದೆಯೇ?

೨. ಭಾಷೆಯನ್ನು ಚಟುವಟಿಕೆಗಳ ರೂಪದಲ್ಲಿಯೇ ಕಲಿಸಬೇಕೆ? ಅನ್ಯ ಮಾರ್ಗವಿಲ್ಲವೇ ?

೩. ತರಗತಿಯ ಎಲ್ಲ ನಮೂನೆಯ ಮಕ್ಕಳಿಗೂ ಒಂದೇ ಚಟುವಟಿಕೆ ಭಾಷೆಯನ್ನು ಕಲಿಯಲು ಸಹಾಯಕವಾಗುತ್ತದೆಯೇ? ನಿಧಾನಗತಿಯ ಕಲಿಕೆಯ ಮಕ್ಕಳಿಗೂ ಈ ಚಟುವಟಿಕೆ ಸಮಾನವಾಗಿ ಅನ್ವವಾಗುತ್ತದೆಯೇ?

**ವಂದನಾ ಪುರಿ:** ಇಲಿನಾಯ್ಸ್ ಯೂನಿವರ್ಸಿಟಿಯಿಂದ ಭಾಷಾಶಾಸ್ತ್ರದಲ್ಲಿ ಪಿಎಚ್.ಡಿ., ಪಡೆದಿದ್ದಾರೆ. ಅವರ ಸಂಶೋಧನಾ ಆಸಕ್ತಿಯು ಅಕೌಸ್ಟಿಕ್ ಫೋನೆಟಿಕ್ಸ್, ಇನ್ಟೋನೇಶನ್, ಪ್ರೊಸೊಡಿ, ಬೈಲಿಂಗ್ವಾಲಿಸಂ, ಇಂಗ್ಲಿಷ್ ಮತ್ತು ಸೋಶಿಯೋಲಿಂಗ್ವಿಸ್ಟಿಕ್ಸ್‌ಗಳನ್ನು ಒಳಗೊಂಡಿದೆ. ಈಗ ಅವರು ಉದಯಪುರದ ವಿದ್ಯಾಭವನ ಸೊಸೈಟಿಯ ಸಲಹೆಗಾರರಾಗಿದ್ದಾರೆ. vandana22puri@yahoo.com

**ಅನುವಾದ:** ಆನಂದ ಡಿ / **ಪರಿಶೀಲನೆ:** ಮಹೇಶ್ ಕುಮಾರ್ ಸಿ ಎಸ್

**ಮೂಲ:** *Language and Language Teaching,* Volume 3 Number 1 Issue 5, January 2013

❑